

ಬಟ್ಟೆಯನ್ನು ಹೊದಿಸಿರುವ ಮೇಜಿನ ಮುಂದೆ ಕುಳಿತು ಮಗ ಒಬ್ಬನೇ ಊಟ ಮಾಡಿದ. ಮೇಜಿನ ಮೇಲೆ ಗಾಜಿನ ಪಾತ್ರೆಯಲ್ಲಿ ಬಣ್ಣ ಕದಡಿದ ನೀರಿನಲ್ಲಿ ಯಾವಾಗಲೂ ಹೂ, ಎಲೆಗಳನ್ನು ಕಿತ್ತು ತಂದು ಜೋಡಿಸಲು ತೋಟದಾಳು ಮರೆತಿರಲಿಲ್ಲ.

ರಾತ್ರಿಯಲ್ಲಿ ನಿದ್ದೆ ಬಾರದೆ ಮಲಗಿದ್ದಾಗ ಮೇಲೆ ಕತ್ತಲಾವರಿಸಿರುವ ಒಳಜಗಲಿಯ ಕುರಿತು ಮಗ ಯೋಚಿಸಿದ.

ಮಲಗುವುದನ್ನು ಅಲ್ಲಿಗೆ ಬದಲಾಯಿಸಿದ್ದು ಅಪ್ಪ ರೋಗಿಯಾದಾಗ. ಆರೋಗ್ಯವಂತ ದಪ್ಪಗಿನ ದೇಹವನ್ನು ನೋಡಿದರೆ ರೋಗ ಆ ಕೋಣೆಯ ಒಳಗೆ ಸೇರಬಹುದೆಂದು ಊಹಿಸುವುದೂ ಸಾಧ್ಯವಿರಲಿಲ್ಲ.

ಒಂದು ಸಂಜೆ ಅಪ್ಪ ಬೇಗ ಮರಳಿದರು. ನಾಲ್ಕು ಗಂಟೆಗೆ ಮರಳಿ ಬಂದ ದಿನಗಳಲ್ಲಿ ಉಡುಪು ಬದಲಾಯಿಸಿ ಎಣ್ಣೆ ಹಚ್ಚಿ ಕೂದಲು ಬಾಚಿ ಮಿನುಗುವಂತೆ ಮಾಡಿ ಕ್ರೀಮು, ಪೌಡರುಗಳ ಸುಗಂಧ ಹರಡಿ ಮತ್ತೆ ಹೊರಟು ಹೋಗುವುದು ರೂಢಿ.

'ನೋಡಿಕೋ, ಚೆನ್ನಾಗಿ ನೋಡಿಕೋ, ಇಂದು ನಿನ್ನೆ ಆರಂಭವಾದುದಲ್ಲ ಇದು. ಅವಳಿಗಿದಕ್ಕೆ ದೇವರು ಕೊಡುತ್ತಾನೆ!'

ಮೆಲ್ಲ ಮೆಲ್ಲನೆ ನಡೆದು ಬಂದರು. ಮೆಟ್ಟಿಲು ಹತ್ತಿ ಮೇಲೆ ತಲುಪುವವರೆಗೆ ಡ್ರೈವರು ಹಿಂದೆಯೇ ಇದ್ದ.

'ಯಜಮಾನರಿಗೆ ಸೌಖ್ಯವಿಲ್ಲ. ಎರಡು ಬಾರಿ ವಾಂತಿ ಮಾಡಿದ್ರು.'

'ವಿಚಾರಿಸಬೇಕೋ?'

ಹಿಡಿದು ನಡೆಸಿಕೊಂಡೇ ಬಂದು ರೂಮಿಗೆ ಕರೆತಂದುದು.

ಕ್ಲಬ್ಬಿನಲ್ಲಿ ವಾಂತಿ ಮಾಡಿದರು. ಇದಕ್ಕೂ ಮೊದಲು ಹಾಗಾಗಿರಲಿಲ್ಲ. ವಯಸ್ಸು ಅಪ್ಪನನ್ನು ಬಾಧಿಸಿರಲಿಲ್ಲ. ಅಮ್ಮನ ಹಣೆಯಲ್ಲಿ ಬಿದ್ದುಕೊಂಡಿರುವ ನರೆತ ಕೂದಲ ಸುರುಳಿಗಳು ಸುಳಿಬಿದ್ದ ಮುಖವನ್ನು ಕಾಣುವಾಗ ಮಗ ಅಪ್ಪನ ಕಡಿಮೆ ವಯಸ್ಸನ್ನು ನೆನಪು ಮಾಡಿಕೊಳ್ಳುವುದಿದೆ.

'ಡಾಕ್ಟರಿಗೆ ತೋರಿಸಲಿಲ್ಲವೇ?'

'ಹೂಂ, ಪರವಾಗಿಲ್ಲ, ನಾಳೆಗೆ ಸರಿಹೋದೀತು.'

ವರಾಂಡದಲ್ಲಿ ನಡೆದು ಸುಮ್ಮನೇ ಅಮ್ಮನ